ದಿಃ 25-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ. ಕೆ ಬಿ ಎಚ್ ವಕೀಲರಿಂದಃ**

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ಅವರು ಕಬ್ಬು ಬೆಳೆ ಬೆಳೆಯುತ್ತಿದ್ದರು. ವರ್ಷಕ್ಕೆ ಎಷ್ಟು ಆದಾಯ ಬರುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆ ಕಬ್ಬು ಬೆಳೆಯುತ್ತಿರಲಿಲ್ಲಿ, ಜೀರಾಯಿತ ಬೆಳೆ ಬೆಳೆಯುತ್ತಿದ್ದರು ಆದಾಯ ಅಷ್ಟೊಂದು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ನಮಗೆ ಮತ್ತು ನನ್ನ ಸಹೋದರರಿಗೆ ಒಳ್ಳೆಯ ವಿದ್ಯೆ ಕೊಡಿಸಿದ್ದಾರೆಂದರೆ ನಾನು ಮತ್ತು 1 ನೇ ಪ್ರತಿವಾದಿ ಮಾತ್ರ ಓದಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಆದಾಯ ಕಡಿಮೆ ಇದ್ದರೂ ನಮ್ಮಗೆ ಶಿಕ್ಷಣ ಕೊಡಿಸಿ ಒಳ್ಳೆಯ ಮನೆಗೆ ಮದುವೆ ಮಾಡಿ ಕೊಟ್ಟಿದ್ದಾರೆಂದರೆ ಸರಿ. ನಮ್ಮ ತಂದೆ ಸಾಲ ಸೊಲ ಮಾಡಿ ನಮ್ಮನ್ನು ಚೆನ್ನಾಗಿ ನೋಡಿಕೊಂಡಿದ್ದಾರೆಂದರೆ ಸರಿ. 1 ನೇ ಪ್ರತಿವಾದಿ 1993 ರಲ್ಲಿ ಮಿಲಿಟರಿ ಸೇರಿದ್ದರು ಎಂದರೆ ಸರಿ. ಅವರು ಮಿಲಿಟರಿ ಹೋದ ನಂತರ ಸಂಬಳವನ್ನು ಆತ ನಮ್ಮ ತಂದೆಗೆ ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಸಂಬಳದಿಂದ ನಮ್ಮ ತಂದೆ ಮಾಡಿಕೊಂಡ ಸಾಲದಿಂದ ಸ್ವಲ್ಪ ಮಟ್ಟಿಗೆ ತೀರಿಸಿದ್ದಾರೆ ಎಂದರೇ ಇರಬಹುದು. 1 ನೇ ಪ್ರತಿವಾದಿಯ ಸಂಬಳದಿಂದ ನಮ್ಮ ಮದುವೆ ಮಾಡಿದ್ದಾರೆಂದರೆ ನಮ್ಮ ತಂದೆ ಮಾಡಿದ್ದಾರೆಂದು ಹೇಳುತ್ತಾರೆ. ಪ್ರತಿವಾದಿ ನಂಬರ 1 ಮತ್ತು .2 ರವರ ಆದಾಯದಿಂದ ನಮ್ಮ ತಂದೆ ನಮ್ಮ ಚಿಕ್ಕಪ್ಪನ ಆಸ್ತಿಯಾದ ಆರ ಎಸ ನಂಬರ

846/1 2 ಎಕರೆ 35 , 820/4ಅ 1 ಎಕರೆ ಆಸ್ತಿಯನ್ನು ಖರೀದಿ ಹಿಡಿದಿದ್ದಾರೆಂದರೆ ಸಾಕ್ಷಿಯೂ ನಮ್ಮ ತಂದೆ ಖರೀದಿ ಹಿಡಿದಿದ್ದಾರೆಂದು ಹೇಳುತ್ತಾರೆ. 1 ನೇ ಪ್ರತಿವಾದಿ 2019 ರಲ್ಲಿ ನಿವೃತ್ತಿ ಹೊಂದಿದ್ದರು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಹಿರಿಯರ ಆಸ್ತಿಗೆ ವಾರಸಾ ಮಾಡಿಕೊಂಡಿದ್ದೇವೆಂದರೆ ಸರಿ. ನಮ್ಮ ಸಹೋದರರ ಆದಾಯದಿಂದ ಖರೀದಿ ಹಿಡಿದ ಜಮೀನಿಗೆ ಸಂಬಧಪಟ್ಟಂತೆ ನಾವು ವಾರಸಾ ಮಾಡಿಕೊಂಡಿಲ್ಲ ಕಾರಣ ಅವು ನಮ್ಮ ಸಹೋದರರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

ನಮ್ಮ ತಾಯಿ ನನ್ನ ಸಹೋದರರ ಬಳಿ ಕಬ್ಬೂರನಲ್ಲಿ ವಾರಸವಾಗಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯೂ ದಿನ ಬೆಳಿಗ್ಗೆ ನಮ್ಮ ಜೊತೆ ಇದ್ದು ರಾತ್ರಿ ಮಾತ್ರ ಮಲಗಲು ಹೋಗುತ್ತಾರೆಂದು ಹೇಳುತ್ತಾರೆ. ನಮ್ಮ ತಾಯಿಗೆ ಈಗ 80 ವರ್ಷ ವಯಸ್ಸ. ಜೋಡಟ್ಟಿ ಯಿಂದ ಕಬ್ಬೂರಗೆ 3 ಕಿ.ಲೊ.ಮೀಟರ ಅಂತರ. ಸಾಕ್ಷಿಯೂ 1 ನೇ ಪ್ರತಿವಾದಿಯ ಮನೆ ಯೂ ಜೋಡಟ್ಟಿಯಲ್ಲಿ ಇದೆ ಎಂದು ಹೇಳುತ್ತಾರೆ. ನಮ್ಮ ತಾಯಿ ನಮ್ಮ ಬಳಿ ಇರೂತ್ತಾಳೆ ಎಂದು ಸುಳ್ಳು ಹೇಳುತ್ತಾರೆ. ನಮ್ಮ ತಾಯಿಯ ಯೋಗಕ್ಷೇಮವನ್ನು ನಮ್ಮ ಸಹೋದರರು ನೋಡಿಕೊಳ್ಳುತ್ತಿದ್ದಾರೆಂದರೆ ಸರಿ. ಜಮೀನಿನ ಆದಾಯದಿಂದ ನೋಡಿಕೊಳ್ಳುತ್ತಿದ್ದಾರೆಂದು ಹೇಳುತ್ತಾರೆ.

ಸರ್ವೆ ನಂಬರ 812 ರಲ್ಲಿ ಒಂದು ಆರ ಸಿ ಸಿ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು ನನ್ನ ಸಹೋದರರು ಕಟ್ಟಿದ್ದಾರೆಂದರೆ ಸರಿಯಲ್ಲ. ನಾನು ಬೇರೆಯವರ ಮಾತು ಕೇಳಿ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಈಗ ಒಂದು ವರ್ಷದ ಹಿಂದೆ ನಮ್ಮ ತಾಯಿಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ನಾವು ಯಾರು ಅವಳನ್ನು ನೋಡಲು ಬರಲಿಲ್ಲ ಪ್ರತಿವಾದಿಯರೇ ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದಾರೆಂದರೆ ಸರಿಯಲ್ಲ.

2 ನೇ ವಾದಿ ದೇವಕಿ ಸಾರಾಪೂರದಲ್ಲಿ ವಾಸವಾಗಿದ್ದಾರೆಂದರೆ ಸರಿ. ಅವರಿಗೆ ಒಂದು ಗಂಡು ಮತ್ತು ಎರಡು ಹೆಣ್ಣು ಮಕ್ಕಳು ಇದ್ದಾರೆಂದರೆ ಸರಿ. ಅವಳ ಮಗಳನ್ನು 1 ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿದ್ದಾರೆಂದರೆ ಸರಿ ಆದರೆ ವಿಚ್ಚೇದನ ಆಗಿದೆ ಎಂದು ಹೇಳುತ್ತಾರೆ. ಅವರಿಗೆ ಒಂದು ಮಗು ಇದೆ. ಸದರಿ 2 ನೇ ವಾದಿ ಸಂಬಂಧ ಚೆನ್ನಾಗಿ ಇದ್ದಾಗ 1ನೇ ಪ್ರತಿವಾದಿಯಿಂದ ಹಣ ಕೇಳಿ ಪಡೆಯುತ್ತಿದ್ದಳು ಎಂದರೆ ಸರಿಯಲ್ಲ. ಸುಮಾರು 5 ರಿಂದ 6 ಲಕ್ಷ ಹಣವನ್ನು 2ನೇ ವಾದಿ 1 ನೇ ಪ್ರತಿವಾದಿಯಿಂದ ಪಡೆದಿದ್ದಾಳೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಣ ಕೊಡುವುದು ನಿಲ್ಲಿಸಿದ ನಂತರ 2 ನೇ ವಾದಿ ತನ್ನ ತಮ್ಮ ಮತ್ತು ಮಗಳ ಮಧ್ಯೆ ಜಗಳ ಹಚ್ಚಿದಳು ಎಂದರೆ ಸರಿಯಲ್ಲ. ಈ ವಿಷಯ ಹಿರಿಯರಲ್ಲಿ ಮುಗಿಯದೇ ಕೊರ್ಟಗೆ

ಹೋಗಿ ಹೈಕೋರ್ಟನಲ್ಲಿ ವಿಚ್ಚೇದನ ಆಯಿತು ಎಂದರೆ ಸರಿ. ನನ್ನ ಸಹೋದರ ಹಣ ನೀಡಿದ ಎಂದರೆ ಸರಿಯಲ್ಲ. ಸದರಿ ಮಗು ಈಗ 1 ನೇ ಪ್ರತಿವಾದಿ ಬಳಿ ಇದೆ ಎಂದರೆ ಸರಿ .

ನನ್ನ ಇನ್ನೊಬ್ಬಳು ಸಹೋದರಿ ರುಕ್ಕವ್ವಾ ಕನಸಗೇರಿಯಲ್ಲಿ ವಾಸವಾಗಿದ್ದಾಳೆ. ಅವರಿಗೆ ಮೂರು ಜನ ಮಕ್ಕಳು. ಅವಳ ಮಗನನ್ನು 2 ನೇ ಪ್ರತಿವಾದಿಗಳು ಸಾಕಿ ವಿದ್ಯೆ ನೀಡಿದ್ದಾರೆಂದರೆ ಸಾಕ್ಷಿಯೂ ನಮ್ಮ ತಾಯಿ ನೀಡಿದ್ದಾಳೆಂದು ಹೇಳುತ್ತಾರೆ . ಅವಳ ಮಗಳ ಮದುವೆಯನ್ನು ಸಹ ನನ್ನ ಸಹೋದರರು 3 ಲಕ್ಷ ಖರ್ಚು ಮಾಡಿ ಮಾಡಿರುತ್ತಾರೆಂದರೆ ಸರಿಯಲ್ಲ. 3 ನೇ ವಾದಿಯು ಮನೆ ಕಟ್ಟುವಾಗ 2 ವರೆ ಲಕ್ಷ ಹಣವನ್ನು 1 ನೇ ಪ್ರತಿವಾಯಿಂದ ಪಡೆದುಕೊಂಡು ಹೋಗಿದ್ದಾಳೆ ಎಂದರೆ ಗೊತ್ತಿಲ್ಲ. 3 ನೇ ವಾದಿಗೆ 1 ನೇ ವಾದಿಯೂ ಸುಮಾರು 5 ರಿಂದ 6 ಲಕ್ಷ ಹಣ ನೀಡಿದ್ದಾರೆಂದರೆ ಗೊತ್ತಿಲ್ಲ. ಈಗ ಮತ್ತೆ ಹಣ ಬೇಡಿದಾಗ 1 ನೇ ಪ್ರತಿವಾದಿಯೂ ಕೊಡಲು ನಿರಾಕರಿಸಿದಾಗ 3 ನೇ ವಾದಿ ಅವನ ಮೇಲೆ ಸಿಟ್ಟಾಗಿದ್ದಾಳೆ ಎಂದರೆ ಗೊತ್ತಿಲ್ಲ.

ನನಗೆ ಇಬ್ಬರು ಮಕ್ಕಳು. ನನ್ನ ಮದುವೆ 2000 ಇಸ್ವಿಯಲ್ಲಿ ಆಗಿದೆ . ನಾನು ಜೋಡಟ್ಟಿ ಯಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ಮಿಲಿಟರಿಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿರುತ್ತಾರೆ. ನನ್ನ ಮಕ್ಕಳು ಇನ್ನೂ ಓದುತ್ತಿದ್ದಾರೆ. ಸರ್ವೆ ನಂಬರ 812 ರಲ್ಲಿ ಆರ ಸಿ ಸಿ ಮನೆಯಲ್ಲಿ ನಾವು ಇದ್ದೇವೆ. ಸದರಿ ಮನೆಯನ್ನು 2021 ರಲ್ಲಿ ಕಟ್ಟಿದ್ದೇವೆ. 2019 ರಲ್ಲಿ

ನಮ್ಮ ಸಹೋದರ ಮಿಲಿಟರಿಯಲ್ಲಿ ನಿವೃತ್ತಿ ಹೊಂದಿ ನಿವೃತ್ತಿಯಿಂದ ಬಂದ ಹಣದಿಂದ ಆ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಕಟ್ಟುವಾಗ ಪಂಚಾಯತದಿಂದ ಪರವಾನಗೆಯನ್ನು ಪ್ರತಿವಾದಿಯರು ತಮ್ಮ ತಾಯಿಯ ಹೆಸರಿನಲ್ಲಿ ತೆಗೆದುಕೊಂಡಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಸ್ವಂತ ಉಪಯೋಗಕ್ಕೆ ಕಟ್ಟಿದ ಮನೆಯನ್ನು ನಾನು ಅವರಿಂದ ಸ್ವಲ್ಪ ದಿವಸ ಇರಲು ಕೇಳಿ ಪಡೆದುಕೊಂಡು ಇದ್ದೇನೆ ಎಂದರೆ ಸರಿಯಲ್ಲ.

ನನ್ನ ಸಹೋದರರು ನಮ್ಮ ಎಲ್ಲಾ ಸಹೋದರಿಯರಿಗೆ ಆರ್ಥಿಕವಾಗಿ ತುಂಬಾ ಸಹಾಯ ಮಾಡಿದ್ದಾರೆಂದರೆ ಸರಿಯಲ್ಲ. ನನ್ನ ತಂದೆ ಮಾಡಿದ ಎಲ್ಲಾ ಸಾಲ ತೀರಿಸಿದ್ದಾರೆಂದರೆ ಸರಿಯಲ್ಲ. ನನ್ನ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೆಂದರೆ ಸರಿಯಲ್ಲ. ನಾವು ಸಹೋದರಿಯರು ವೈಮನಸ್ಸು ಇಟ್ಟು ಕೊಂಡು ಅವರ ಮೇಲೆ ಸುಳ್ಳು ಪ್ರಕರಣ ಹಾಕಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯಿಂದ ನಮಗೆ ಏನೂ ಆಸ್ತಿ ಬರಬೇಕಾಗಿತ್ತು ಅದರ ಬದಲು ಖರ್ಚು ಮಾಡಿ ಮದುವೆ ಮಾಡಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಪಾಲು ವಿಭಾಗ ಇಲ್ಲ ಎಂದರೆ ಸರಿಯಲ್ಲ. ಬೇರೆಯವರ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ

(ಸಾಕ್ಷಿಗೆ ಕನ್ನಡದಲ್ಲಿ ಕೇಳಿದ ಪ್ರಶ್ನೇಗಳನ್ನು ಮರಾಠಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಮಾರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥವತ್ತಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ